ಪಿ. ಜಯವಂತ ಪೈ, ಕುಂದಾಪುರ
ಕವಿಗೂ, ಕಪಿಗೂ ವ್ಯತ್ಯಾಸವೇನು?




ಕಪಿಗೆ ವಿಮರ್ಶಕರ ಕಾಟವಿಲ್ಲ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಮನಸ್ಸಿದ್ದರೆ ಮಾರ್ಗ ಎನ್ನುತ್ತಾರೆ. ನಿಜವೇ ಸಾರ್?
ಮಾರ್ಗ ಇರುತ್ತದೆ, ಬಸ್ಸೂ ಇರುತ್ತದೆ. ಬಸ್ ಚಾರ್ಜ್‌ನದೇ ತೊಂದರೆ.

ಬಿ. ಚಂದ್ರೇಗೌಡ, ಬೆಂಗಳೂರು
ಆತ್ಮಸಾಕ್ಷಿಗೂ ಅಗ್ನಿಸಾಕ್ಷಿಗೂ ಏನು ವ್ಯತ್ಯಾಸ?
ಆತ್ಮಸಾಕ್ಷಿ ಆಗಾಗ್ಗೆ ಬದಲಾಗುತ್ತದೆ. ಅಗ್ನಿಸಾಕ್ಷಿ ಒನ್ ಟೈಮ್ ಕಮಿಟ್‌ಮೆಂಟ್.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಕುಟುಂಬವನ್ನು ಪ್ರೀತಿಸಲು ಕಾರಣ ಬೇಕೆ?
ಯಾರ ಕುಟುಂಬವನ್ನು?

ಶೃತಿ ರಿಗ್ರೆಟ್ ಐಯ್ಯರ್, ನ್ಯೂಜರ್ಸಿ
ಜ್ಯೋತಿಷಿಗಳ ಗಿಳಿಗಳಿಗೆ ನಮ್ಮ ಭವಿಷ್ಯ ಹೇಗೆ ಗೊತ್ತಿರುತ್ತೆ ಗುರೂ?



ಜ್ಯೋತಿಷಿಯೆಂಬ ಹದ್ದು ರಹಸ್ಯ ನಿರ್ದೇಶನದ ಮೂಲಕ ತಿಳಿಸುವುದಂತೆ.

ಕಾವ್ಯಶ್ರೀ ಪತ್ರಿಮಠ, ಸುರಪುರ
ದ್ವೇಷವಿದ್ದಲ್ಲಿ ಪ್ರೀತಿ ಇರುತ್ತದಂತೆ, ನಿಜವೇ?
ನಿಜ. ಸ್ವಪ್ರೀತಿ!

ಟಿ.ಎಂ. ಮಾನಪ್ಪ, ಶಿವಮೊಗ್ಗ
ಸರ್ಕಾರಿ ಕೆಲಸ ದೇವರ ಕೆಲಸ ಅಂತಾರಲ್ಲ, ಅದು ಹೇಗೆ?
ಇಲ್ಲಿಯೂ ಕಾಣಿಕೆ, ನೈವೇದ್ಯ ನೀಡುವುದಲ್ಲದೆ ಸಮಸ್ತನಾಮಾರ್ಚನೆ, ಮಂಗಳಾರತಿಯನ್ನೂ ಮಾಡುತ್ತೇವಲ್ಲ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ತೇಜಸ್‌ಗೂ ವರ್ಚಸ್‌ಗೂ ಏನು ವ್ಯತ್ಯಾಸ?
ವರ್ಚಸ್ ಯುದ್ಧಾಸ್ತ್ರವಲ್ಲ; ತೇಜಸ್ ಭಾರತದ ಕ್ಷಿಪಣಿ.

ಉಮಾ ಎಂ.ವಿ. ಬೆಂಗಳೂರು
ಸೂರ್ಯನಿಗೆ ಜಲದ ತರ್ಪಣ, ಗಂಗೆಗೆ ದೀಪದ ಆರತಿ ಏಕೆ ಗುರುವರ್ಯ?
ಗರಂ ಸೂರ್ಯನ ಬಾಯಾರಿಕೆ, ಶೀತಲ ಗಂಗೆಯ ಥಂಡಿ ಹೋಗಲಾಡಿಸಲು.

ಎಚ್.ಎಸ್. ನಂದಕುಮಾರ್, ಮಂಗಳೂರು
ಶುದ್ಧ–ಅಶುದ್ಧ, ಪವಿತ್ರ–ಅಪವಿತ್ರ ಇವನ್ನೆಲ್ಲ ನಿರ್ಧರಿಸುವವರು ಯಾರು ರಾಮ್?
ಕಣ್ಣು–ನಾಲಿಗೆ–ಮನಸ್ಸುಗಳು. ಅವು ಸ್ವಚ್ಛವಿದ್ದರೆ ಜಗ ಸ್ವಚ್ಛ.

ಮಲ್ಲಿಕಾರ್ಜುನ, ಸುರಧೇನುಪುರ
ಬೆಂದರೆ ಬೇಂದ್ರೆ ಅಂದರೆ ಇಲ್ಲೊಬ್ಬ ಬೆಂದರೆ ಬೋಂಡಾ ಅಂತಿದಾನಲ್ಲ?
ಗಂಗಾವತರಣ ಎಂದರೆ ಖಾರ ತಿಂದಾಗಿನ ಸ್ಥಿತಿ ಎನ್ನುವವನಿಗೆ ಅಷ್ಟೇ ಹೊಳೆಯುವುದು.

ಎಂ.ಟಿ. ರಮಾನಂದರೆಡ್ಡಿ, ಮದಕರಿಪುರ
ವಿಷಯಗಳನ್ನು ಅಬ್ಬರಿಸಿ ಬೊಬ್ಬಿರಿದು ಪ್ರಚಾರ ಮಾಡಿ ಜನರಲ್ಲಿ ಭೀತಿ ಹೆಚ್ಚಿಸುವ ಮಾಧ್ಯಮಗಳಿಗೆ ನಿಮ್ಮ ಸಲಹೆ?
ಸಲಹೆ ವೀಕ್ಷಕರಿಗೆ ಚಾನಲ್ ಬದಲಿಸಿ, ನೆಮ್ಮದಿ ಗಳಿಸಿ.

ಬಿ.ಆರ್. ಉಷಾ, ಬೆಂಗಳೂರು
ಇಲ್ಲೊಬ್ಬ ಮಕ್ಕಳಿಗೆ ಲಾಂಗು, ಮಚ್ಚು ಅಂತ ಹೆಸರಿಟ್ಟಿದ್ದಾನಲ್ಲಾ...?
ಮೂಲನಾಮಗಳು ನೀಲ, ಪುರು; ಇಂಗ್ಲಿಷ್ ಶಾಲೆಗೆ ಸೇರಿಸುವಾಗ ನಿಘಂಟಿನಿಂದ ಪಡೆದ ಅ(ನ)ರ್ಥಗಳಿವು.

ಸಿಹಿಮೊಗೆ ರಮೇಶ್, ಮೈಸೂರು
ಅಂದು ನೃಪರು ಛದ್ಮವೇಷದಲ್ಲಿ ಜನಮನ ತಿಳಿಯುತ್ತಿದ್ದರು. ಇಂದು ಮುಖಂಡರು ಛದ್ಮವೇಷದಲ್ಲಿ ಅನೈತಿಕತೆಯಲ್ಲಿ ತೊಡಗುವರಲ್ಲಾ?
ಥೂ! ಗಂಧಕ್ಕೆ ಹೊಲಸ ಹೋಲಿಸುವುದೇ! ಅವರು ದೇಶದ ರಾಜರು; ಇವರು ದೇಶ ಹರಾಜರು.

## ವಾರದ ಪ್ರಶ್ನೆ

ಪಿ.ಎನ್. ಶ್ರೀವತ್ಸ, ಬೆಂಗಳೂರು
ಈಗಿನ ಕೋವಿಡ್ ಅಂದಿನ ಮಲೇರಿಯಾ, ಪ್ಲೇಗು, ಸಿಡುಬುಗಳಿಗಿಂತ ಯಾವುದರಲ್ಲಿ ಕಡಿಮೆ ಇದೆ?
ದೇವಸ್ಥಾನಗಳಲ್ಲಿ ಮಾರಿಯಮ್ಮಳಿಗೆ ಇರುವಷ್ಟು ದೇಗುಲ ಕೊರೊನಮ್ಮನಿಗೆ ಇಲ್ಲ.

ಗೋಪಾಲರಾವ್, ಬೆಂಗಳೂರು
ಕಾವ್ಯ ಕನ್ನಿಕೆಯಾದರೆ ಕಾದಂಬರಿ ಏನು?
ಪ್ರೌಢ ಮಹಿಳೆ.

ಪಿ.ಜೆ. ರಾಘವೇಂದ್ರ, ಮೈಸೂರು
ಮದ್ಯದ ಅಮಲಿನಲ್ಲಿ ತೊದಲುವ ಜನಪ್ರತಿನಿಧಿಗಳಿಂದ ಏನನ್ನು ನಿರೀಕ್ಷಿಸಬಹುದು?
ಸ್ವಲ್ಪ ಹೊತ್ತಿನಲ್ಲೇ ಘನಘೋರ ಗೊರಕೆ.

ಕೆ.ಹೆಚ್.ಆರ್.ಕೆ. ರೆಡ್ಡಿ, ಬೆಂಗಳೂರು
ಪ್ರಪಂಚದಲ್ಲಿ ಮೊದಲು ಮನೆ ಕಟ್ಟಿದ್ದು ಎಲ್ಲಿ?



ಗಿಡದಲ್ಲಿ, ಕಟ್ಟಿದ್ದು ಗೀಜಗ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ
ನಿಮ್ಮ ಬುದ್ಧಿವಂತಿಕೆಯ ಗುಟ್ಟೇನು ಗುರುಗಳೆ?
ಕೇಳುಗರ ಪ್ರಶ್ನೆಗಳು ಸ್ಫುರಿಸುವ ಜ್ಞಾನದಾಹ.

ಮಂಡಿ ಕುಮಾರ್, ಬೆಂಗಳೂರು
ಪ್ರೇಮಪಾಶ ವರವೋ ಶಾಪವೋ?
ತಬ್ಬುವಂತಿದ್ದರೆ ವರ; ತಬ್ಬಿಬ್ಬಾಗುವಂತಿದ್ದರೆ ಶಾಪ.

ಚನ್ನವೀರಪ್ಪ, ಹಿರೇಹಡಗಲಿ
ಆತಂಕಕ್ಕೂ ಕುತೂಹಲಕ್ಕೂ ಇರುವ ವ್ಯತ್ಯಾಸವೇನು?
ಸ್ವಂತ ಮಗಳು ದಾರಿ ತಪ್ಪಿದರೆ ಆತಂಕ. ಪಕ್ಕದ ಮನೆಯವಳು ದಾರಿ ತಪ್ಪಿದರೆ ಕುತೂಹಲ.

■ ರಾಮ್

ನೀವೂ ಪ್ರಶ್ನೆ ಕಳಿಸಿ: editorsu@sudha.co.in